| Publication: | Kannada Prabha | Edition: | Bangalore |
|---|---|---|---|
| Published Date: | 22 July 2017 | Page No.: | 4 |
| | | Display: | 1/1 |

# ವೈಯಾಲಿಕಾವಲ್‌ನಲ್ಲಿ ಆ.3ಕ್ಕೆ ಟಿಸಿಎಸ್ ಐಟಿ ವಿಜ್

**ಬೆಂಗಳೂರು:** ದೇಶದ ಪ್ರಮುಖ ಮಾಹಿತಿ ತಂತ್ರಜ್ಞಾನ ಸಂಸ್ಥೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್(ಟಿಸಿಎಸ್) ಆ.3 ರಂದು ನಗರದ ವೈಯಾಲಿಕಾವಲ್‌ನ ಚೌಡಯ್ಯ ಸ್ಮಾರಕ ಭವನದಲ್ಲಿ ಮಾಹಿತಿ ತಂತ್ರಜ್ಞಾನ ಕ್ವಿಜ್ 'ಟಿಸಿಎಸ್ ಐಟಿ ವಿಝ್ 2017' ಆಯೋಜಿಸಿದೆ. ಇದರಲ್ಲಿ ಪಾಲ್ಗೊಳ್ಳಲು ಪ್ರವೇಶ ಶುಲ್ಕ ಇರುವುದಿಲ್ಲ. 8ರಿಂದ 12ನೇ ತರಗತಿ (ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ) ವರೆಗಿನ ವಿದ್ಯಾರ್ಥಿಗಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಹುದು. ಪ್ರತಿ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಯಿಂದ ತಲಾ ಇಬ್ಬರು ವಿದ್ಯಾರ್ಥಿಗಳನ್ನು ಒಳಗೊಂಡ 10 ತಂಡ (ಪ್ರತಿ ತಂಡದಲ್ಲಿ ಇಬ್ಬರು ವಿದ್ಯಾರ್ಥಿಗಳು)ಗಳನ್ನು ಕಳುಹಿಸಲು ಅವಕಾಶ ಕಲ್ಪಿಸಲಾಗಿದೆ. ಅಹ್ಮದಾಬಾದ್, ಬೆಂಗಳೂರು, ಭುವನೇಶ್ವರ, ದೆಹಲಿ ಸೇರಿದಂತೆ ದೇಶದ ಒಟ್ಟು 12 ಸ್ಥಳಗಳಲ್ಲಿ ಕ್ವಿಜ್ ನಡೆಯಲಿದೆ. ಪ್ರವೇಶ ಅರ್ಜಿಯನ್ನು ಆಯಾ ಸಂಸ್ಥೆಗಳು ಜುಲೈ 29ರೊಳಗೆ ಟಿಸಿಎಸ್ ಐಟಿ ವಿಝ್ ಕೋಆರ್ಡಿನೇಟರ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಎಸ್‌ಜೆಎಂ ಟವರ್, 18, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು-560009 ಇಲ್ಲಿಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗೆ 080-67246000, www.tcs.com ನೋಂದಣಿಗೆ www.tcsitwiz.com ವೀಕ್ಷಿಸಬಹುದು. ಪ್ರಾದೇಶಿಕ ಹಂತದಲ್ಲಿ ವಿಜೇತರಾಗುವ ತಂಡಕ್ಕೆ 60,000 ರೂ. ಗಿಫ್ಟ್ ಓಚರ್ ಸಿಗಲಿದೆ. ರನ್ನರ್ ಅಪ್‌ಗೆ 40,000 ರೂ., 6 ಫೈನಲಿಸ್ಟ್‌ಗಳಿಗೆ ಟಿಸಿಎಸ್ ಕಡೆಯಿಂದ ಡಬಲ್ ಜಿಮ್ ಬ್ಯಾಗ್, ಒಟಿಜಿ ಪೆನ್‌ಡ್ರೈವ್, ಇಯರ್‌ಫೋನ್ ಮತ್ತು ಬ್ಲೂಟೂತ್ ಸ್ಪೀಕರ್‌ಗಳನ್ನು ಬಹುಮಾನದ ರೂಪದಲ್ಲಿ ನೀಡಲಾಗುತ್ತದೆ. ಪ್ರಾದೇಶಿಕದಲ್ಲಿ ಚಾಂಪಿಯನ್ ಆದ ವಿದ್ಯಾರ್ಥಿಗಳ ಜೊತೆಗೆ ಪೋಷಕರು ಅಥವಾ ಶಿಕ್ಷಕರು ಮುಂಬೈನಲ್ಲಿ ನಡೆಯಲಿರುವ ರಾಷ್ಟ್ರೀಯ ಫೈನಲ್‌ಗೆ ತೆರಳಲು ಅವಕಾಶವಿರುತ್ತದೆ